ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-೫೮೪ ೧೩೩, ರಾಯಚೂರು, ಕರ್ನಾಟಕ ರಾಜ್ಯ, ಭಾರತ

ಆಡಳಿತ ವಿಭಾಗ E-mail: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/ವಿ.ವಿ.ಪರಿಷತ್ ಸಭೆ/2022-23/ ೪೬೦ ದಿನಾಂಕ: 04.07.2022

## ವಿದ್ಯಾ ವಿಷಯಕ ಪರಿಷತ್ ವಿಶೇಷ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ: 07.07.2022 ರಂದು ಗುರುವಾರ ಬೆಳಿಗ್ಗೆ 10:30 ಗಂಟೆಗೆ ಸ್ಥಳೀಯ ತನಿಖಾ ಸಮಿತಿಗೆ ಸಂಬಂಧಿಸಿದ (LIC) ವಿಶೇಷ ವಿದ್ಯಾ ವಿಷಯಕ ಪರಿಷತ್ ಸಭೆಯನ್ನು ಆಯೋಜಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ :04.07.2022

***

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸ್ಥಳೀಯ ತನಿಖಾ ಸಮಿತಿಗೆ ಸಂಬಂಧಿಸಿದ (LIC) ವಿದ್ಯಾ ವಿಷಯಕ ಪರಿಷತ್ ವಿಶೇಷ ಸಭೆಯನ್ನು ಗುರುವಾರ, **ದಿನಾಂಕ:** 07.07.2022 **ರಂದು ಬೆಳಿಗ್ಗೆ** 10.30 **ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಆಯೋಜಿಸಲಾಗಿದೆ.** ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

### ವಿಶೇಷ ಸಭೆಯ ಕಾರ್ಯಸೂಚಿ

1. 2022-23 ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸಿದ 184 ಕಾಲೇಜುಗಳ ಸ್ಥಳಿಯ ತನಿಖಾ ಸಮಿತಿಗಳು ಕಾಲೇಜಿಗೆ ಭೌತಿಕವಾಗಿ ಭೇಟಿ ನೀಡಿ ತಪಸಾಣೆ ಮಾಡಿ ಆನ್‌ಲೈನ್ ಪೋರ್ಟಲ್‌ದಲ್ಲಿ ಮಾಹಿತಿಯನ್ನು ದಾಖಲಿಸಿ ವರದಿ ಸಲ್ಲಿಸಿರುತ್ತಾರೆ ಸದರಿ ಕಾಲೇಜುಗಳ Score Card ಹಾಗೂ ಸ್ಥಳೀಯ ತನಿಖಾ ಸಮಿತಿಯವರ Observations and Recommendations ಗಳ ವಿವರಗಳನ್ನು ಕರ್ನಾಟಕ ಸರ್ಕಾರದ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59ರ ಪ್ರಕಾರ ವಿದ್ಯಾ ವಿಷಯಕ ಪರಿಷತ್ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುವುದು.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು

ಇವರಿಗೆ,

1. ಮಾನ್ಯ ಕುಲಪತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ.

ಪ್ರತಿಯನ್ನು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2) ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
3) ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4) ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5) ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
7) ಕಛೇರಿ ಪ್ರತಿ.

## ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 07-07-2022 ರಂದು ಮುಂಜಾನೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

### ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

1) ಪ್ರೊ. ಹರೀಶ ರಾಮಸ್ವಾಮಿ, ಮಾನ್ಯಕುಲಪತಿಗಳು – ಅಧ್ಯಕ್ಷರು
2). ಶ್ರೀ ರಾಜ ಶ್ರೀನಿವಾಸ್ – ಸದಸ್ಯರು
3) ಶ್ರೀ ಬಿ.ಎಸ್.ಸುರಗಿಮಠ – ಸದಸ್ಯರು
4) ಶ್ರೀ ಮಲ್ಲಿಕಾರ್ಜುನ ಹಳ್ಳೂರ – ಸದಸ್ಯರು
5) ಡಾ: ಶಶಿಕಲಾ ಎನ್.ಓಗಿ – ಸದಸ್ಯರು
6) ಶ್ರೀ ಅಭಿಲಾಶ್ ಐದನಾಳ – ಸದಸ್ಯರು
7) ಶ್ರೀಮತಿ ಲೀನಾ ಹುಳಗೇರಿ, – ಸದಸ್ಯರು
8) ಡಾ: ನೇಹಾ ಸುಖಾನಿ – ಸದಸ್ಯರು
9) ಡಾ: ಶಿವರಾಜ ದೇಶಮುಖ್ – ಸದಸ್ಯರು
10) ಡಾ: ಶರಣರೆಡ್ಡಿ ಕೋಡ್ಲ್, – ಸದಸ್ಯರು
11) ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
12) ಪ್ರೊ. ಪಾರ್ವತಿ ಸಿ. ಎಸ್. ಹಣಕಾಸು ಅಧಿಕಾರಿಗಳು – ಸದಸ್ಯರು
13) ಪ್ರೊ. ಪಿ. ಭಾಸ್ಕರ್, ಡೀನರು – ಸದಸ್ಯರು
14) ಪ್ರೊ. ನುಸ್ರತ್ ಫಾತಿಮಾ, ಡೀನರು – ಸದಸ್ಯರು
15) ಡಾ: ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
16) ಡಾ: ಜಿ.ಎಸ್. ಬಿರಾದರ, ಗ್ರಂಥಪಾಲಕರು – ಸದಸ್ಯರು
17) ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸ್ವಾಗತಿಸಿ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ ಐಟಂ ನಂ. | ವಿಷಯ | ವಿಶೇಷ ವಿದ್ಯಾವಿಷಯಕ ಪರಿಷತ್ ನಿರ್ಣಯ |
|---|---|---|
| 1 | 2022-23ರ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸಿದ 184 ಕಾಲೇಜುಗಳ ಸ್ಥಳೀಯ ತನಿಖಾ ಸಮಿತಿಗಳು ಕಾಲೇಜಿಗೆ ಭೌತಿಕವಾಗಿ ಭೇಟಿ ನೀಡಿ ತಪಾಸಣೆ ಮಾಡಿ ಆನ್‌ಲೈನ್ ಪೋರ್ಟಲ್‌ನಲ್ಲಿ ಮಾಹಿತಿಯನ್ನು ದಾಖಲಿಸಿ ವರದಿ ಸಲ್ಲಿಸಿರುವ ಕಾಲೇಜುಗಳ ಸ್ಕೋರ್ ಕಾರ್ಡ | ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ. ರಾಘವೇಂದ್ರ ಫತ್ತೇಪೂರ ಇವರು ಸಂಲಗ್ನತೆಯ ಅಂಕಿ-ಅಂಶಗಳನ್ನು ಮಂಡಿಸಿದರು. ಸ್ಥಳೀಯ ತನಿಖಾ ತಂಡದ ಸದಸ್ಯರು 195 ಕಾಲೇಜುಗಳಿಗೆ ಭೌತಿಕವಾಗಿ ಭೇಟಿ ನೀಡಿ ತಪಾಸಣೆ ಮಾಡಿರುತ್ತಾರೆ. ಸಂಯೋಜನಾ ತಂತ್ರಾಂಶ ನೀಡಿರುವ ಸ್ಕೋರ್ ಕಾರ್ಡ ಹಾಗೂ ಸ್ಥಳೀಯ ತನಿಖಾ ಸಮಿತಿಯವರ ವರದಿಯ ಪ್ರಕಾರ 102 ಕಾಲೇಜುಗಳು 45% ಕ್ಕೂ ಹೆಚ್ಚು ಅಂಕಗಳನ್ನು, 30 ಕಾಲೇಜುಗಳು 40% ರಿಂದ 45% ಅಂಕಗಳನ್ನು, 25 ಕಾಲೇಜುಗಳು 35% ರಿಂದ 40% ಅಂಕಗಳನ್ನು, 19 ಕಾಲೇಜುಗಳು 30% ರಿಂದ 35% ಅಂಕಗಳನ್ನು, 5 ಕಾಲೇಜುಗಳು 25% ರಿಂದ 30% ಅಂಕಗಳನ್ನು, 3 ಕಾಲೇಜುಗಳು 20% ರಿಂದ 25% ಅಂಕಗಳನ್ನು, 7 ಕಾಲೇಜುಗಳು 20% ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುತ್ತವೆ.<br>ಈ ಕುರಿತು ಸಭೆಯು ಕೂಲಂಕುಷವಾಗಿ ಚರ್ಚಿಸಿ ಸರಕಾರದ ಮಾರ್ಗಸೂಚಿಗಳ |

| | | |
|---|---|---|
| | ಹಾಗೂ ಸ್ಥಳೀಯ ತನಿಖಾ ಸಮಿತಿಯವರ ವಿವರಗಳನ್ನು ಕರ್ನಾಟಕ ಸರ್ಕಾರದ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59ರ ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮದ ಬಗ್ಗೆ ಚರ್ಚೆ. | ಪ್ರಕಾರ ತುಲನೆ ಮಾಡಿ ಸಂಲಗ್ನತೆ ಮುಂದುವರೆಸುವ ಬಗ್ಗೆ ಚರ್ಚಿಸಲಾಯಿತು. ಸುಮಾರು 59 ಕಾಲೇಜುಗಳು 40% ಕಡಿಮೆ ಇದ್ದು ಇವುಗಳ ಸಂಲಗ್ನತೆಯನ್ನು ಮುಂದುವರೆಸಬಾರದೆಂದು ಕೆಲವು ಸದಸ್ಯರು ಆಗ್ರಹಿಸಿದರು. ಮುಂದುವರೆದು, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಲಗ್ನತೆ ಹೊಂದಿದ ಕಾಲೇಜುಗಳು ರಾಯಚೂರು ವಿಶ್ವವಿದ್ಯಾಲಯಕ್ಕೆ ಹೊಸದಾಗಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸೇರ್ಪಡೆಗೊಂಡಿದ್ದರಿಂದ ಈ ಕಾಲೇಜುಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಇನ್ನೂ ಕಾಲಾವಕಾಶ ಬೇಕಾಗುತ್ತದೆ ಎಂದು ಕುಲಪತಿಗಳು ಮತು ಕುಲಸಚಿವರು ಸಭೆಗೆ ವಿವರಿಸಿದರು ಹಾಗೂ ಉನ್ನತ ಶಿಕ್ಷಣದಲ್ಲಿ ಈ ಭಾಗದಲ್ಲಿ ಜಿಇಆರ್ ಬಹಳ ಕಡಿಮೆ ಇರುವ ಕಾರಣ ಸಂಲಗ್ನತೆ ಮುಂದುವರೆಸಬೇಕೆಂದು ತಿಳಿಸಿದರು. ಇದನ್ನು ಪರಿಗಣಿಸಿ ವಿದ್ಯಾವಿಷಯಕ್ ಸಭೆಯ ಸದಸ್ಯರು 40%ಕ್ಕಿಂತ ಕಡಿಮೆ ಅಂಕ ಗಳಿಸಿರುವ 59 ಕಾಲೇಜುಗಳ ಸಂಲಗ್ನತೆಯನ್ನು ಯಾವುದೇ ಕಾರಣಕ್ಕೆ ಮುಂದುವರೆಸಬಾರದೆಂದು ಸರ್ವಾನುಮತದಿಂದ ತೀರ್ಮಾನಿಸಿದರು.<br>ಮಾನ್ಯ ಕುಲಪತಿಗಳು ಸಂಲಗ್ನತೆಯ ಪ್ರಕ್ರಿಯೆಯ ಕುರಿತು ವಿದ್ಯಾವಿಷಯಕ್ ಪರಿಷತ್‌ನಲ್ಲಿ ನಿರ್ಣಯಿಸುವ ಈ ತೀರ್ಮಾನವನ್ನು ನಿಯಮಾನುಸಾರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿ, ವಿದ್ಯಾವಿಷಯಕ್ ಪರಿಷತ್ ತೀರ್ಮಾನವನ್ನು ಅನುಮೋದಿಸಿದರು. |

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

**ಕುಲಪತಿಗಳು ಮತ್ತು ಅಧ್ಯಕ್ಷರು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು